**<u>ದಿಃ-31-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟಿಸವಾಲು : ಪ್ರತಿವಾದಿ ಪರ ಶ್ರೀ. ಎಂ.ಯು.ಪಿ ವಕೀಲರಿಂದ :</u>**

1. ನಿ.ಪಿ.1 ರ ಕ್ರಯ ಪತ್ರದಲ್ಲಿ ನಮೂದಿಸಿರುವ ಶಾಮಣ್ಣ ರೆಡ್ಡಿಯವರು ವಾದಿಯವರ ತಂದೆಯಾಗಿರುತ್ತಾರೆ. ನಿ.ಪಿ.1 ರಲ್ಲಿ ನಮೂದಿಸಿರುವ ತಪಸೀಲಿನ ಆಸ್ತಿಯು ವಿಭಾಗ ಪತ್ರದಂತೆ ವಾದಿಯವರ ತಂದೆಗೆ ಬಂದಿರುತ್ತದೆ ಎಂದು ನಮೂದಿಸಿದ್ದು ಆ ವಿಭಾಗ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಶಾಮಣ್ಣ ರೆಡ್ಡಿಯವರಿಗೆ ಎಷ್ಟು ಆಸ್ತಿ ಇದೆ ಎಂಬ ಬಗ್ಗೆ ತೋರಿಸುವಂತಹ ಕಂದಾಯ ದಾಖಲೆಗಳಾದ ಮ್ಯುಟೇಷನ್ ರೆಜಿಸ್ಟರ್, ಆರ್.ಟಿ.ಸಿ, ಟಿಪ್ಪಣಿ, ಆಕರ ಬಂದ್ ಮತ್ತು ನಕಾಶೆಗಳು ನಮ್ಮ ಬಳಿ ಇರುವುದಿಲ್ಲ. ನನ್ನ ಮಾವನವರ ಕುಟುಂಬದಲ್ಲಿ ಇದ್ದರೂ ಇರಬಹುದು.

2. ಸರ್ವೇ ನಂ.56/10 ಕ್ಕೆ ಸಂಬಂಧಿಸಿದಂತಹ ಸ್ವತ್ತನ್ನು ಶಾಮಣ್ಣ ರೆಡ್ಡಿಯವರು ಸಂಪೂರ್ಣವಾಗಿ ಮಾರಿದ್ದಾರೆ. ಸಾಕ್ಷಿ ಮುಂದುವರಿದು ಅದರಲ್ಲಿ ನಡೆದಾಡುವ ದಾರಿಯನ್ನು ಅವರು ಉಳಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.1 ರಂತೆ 2 ಎಕರೆ 39 ಗುಂಟೆಯನ್ನು ಮಾರಿದ ನಂತರ 4*100 ಅಡಿಯನ್ನು ಉಳಿಸಿಕೊಂಡಿದ್ದಾರೆ ಎಂದು ನಾನು ಹೇಳುತ್ತಿರುವುದು ಸುಳ್ಳು ಮತ್ತು ಅಂತಹ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತಹ 4*100 ಅಡಿ ಉಳಿಸಿಕೊಂಡಿದ್ದೇನೆ ಎಂದು ಹೇಳುವ ಸ್ವತ್ತಿಗೆ ಪೋಡಿಯನ್ನು ಮಾಡಿರುವುದಿಲ್ಲ ಆದರೆ ಅದರ ಹಿಂದೆ ನಮ್ಮ ಜಮೀನನ್ನು ನಾವು

ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು ಹೇಳುವಂತಹ 4*100 ಅಡಿ ಜಮೀನು ಅಸ್ತಿತ್ವದಲ್ಲಿ ಇಲ್ಲ ಆದ್ದರಿಂದಲೇ ನಾವು ಪೋಡಿ ಮಾಡಿಲ್ಲ ಎಂದರೆ ಸರಿಯಲ್ಲ.

3. ನನ್ನ ವಾದ ಪತ್ರದಲ್ಲಿ ನಮೂದಿಸಿದಂತೆ ನಿ.ಪಿ.1 ರಲ್ಲಿ ತಪ್ಪಾಗಿ 4*100 ಅಡಿ ಜಮೀನು ಎಂದು ಬರೆದಿದ್ದು ಅದು 10*100 ಅಡಿ ಆಗಬೇಕಿತ್ತು ಎಂದು ಹೇಳುತ್ತಿರುವುದು ಸುಳ್ಳು ಅಂತಹ ಯಾವುದೇ ಜಮೀನು ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

4. ನಮಗೆ ಮಾರಿದ ಸರ್ವೇ ನಂ.56/10 ರ ಪಕ್ಕದಲ್ಲಿ ಮೈಕೊ ಸೊಸೈಟಿಯವರು ಲೇಔಟ್ ಮಾಡಿದ್ದು ಅದು ಸರ್ವೇ ನಂ.56/10 ನಮ್ಮ ಜಮೀನಿನ ದಕ್ಷಿಣ ದಿಕ್ಕಿನಲ್ಲಿದೆ. ಮೈಕೊ ಸೊಸೈಟಿಯವರ ಸರ್ವೇ ನಂಬರು ಎಷ್ಟು ಎಂದು ನನಗೆ ಗೊತ್ತಿಲ್ಲ.

5. ನನ್ನ ವಾದ ಪತ್ರದ ಖಂಡಿಕೆ 5 ರಲ್ಲಿ ಸರ್ವೇ ನಂ.56/2, 56/3, 56/4, 56/5 ಬಿ, 56/7 ಮತ್ತು 56/8 ನ್ನು ಮೈಕೊ ಸೊಸೈಟಿಯವರು ಲೇಔಟ್ ಮಾಡಲು ಉಪಯೋಗಿಸಿದ್ದಾರೆ ಎಂದು ನಮೂದಿಸಿದ್ದೇನೆ ಎಂದರೆ ಇರಬಹುದು. ನಾನು ಹೇಳಿದಂತೆ ಸರ್ವೇ ನಂ.56/2 ಬರದೆ ಅದು 56/3 ರಿಂದಲೇ ಬರಬೇಕು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

6. ನಿ.ಪಿ.1 ರ ತಪಸೀಲಿನ ದಕ್ಷಿಣದಲ್ಲಿ ಮೈಕೊ ಸೊಸೈಟಿಯ ಆಸ್ತಿ ಎಂದು ಬರೆದಿದೆ ಎಂದರೆ ಸಾಕ್ಷಿಯು ಅದರಲ್ಲಿ ಐ.ಎನ್.ಕೃಷ್ಣ ಮಧ್ಯಸ್ಥರವರ ಜಮೀನು ಎಂದು ನಮೂದಿಸಿದೆ ಎಂದು ನುಡಿಯುತ್ತಾರೆ. ಅದು ಸೊಸೈಟಿಯವರ ಜಮೀನು ಎಂದರೆ

ಸಾಕ್ಷಿಯು ಅದನ್ನು ಸೊಸೈಟಿಯವರು 1993 ರಲ್ಲಿ ಐ.ಎನ್.ಕೃಷ್ಣ ಮಧ್ಯಸ್ಥರವರಿಂದ ಜಿಪಿಎ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಆಸ್ತಿಗಳಲ್ಲಿ ಸೊಸೈಟಿಯವರು ಬಡಾವಣೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಮಾಡಿರಬಹುದು ಎಂದು ನುಡಿಯುತ್ತಾರೆ.

7. ಮೈಕೊ ಸೊಸೈಟಿಯವರು ಆ ಸ್ವತ್ತುಗಳನ್ನು ಖರೀದಿ ಮಾಡಿದ ನಂತರ ತಮ್ಮ ಹೆಸರಿಗೆ ಕಂದಾಯದ ದಾಖಲೆಗಳನ್ನು ಆರ್.ಟಿ.ಸಿ, ಮ್ಯುಟೇಷನ್ ರೆಜಿಸ್ಟರ್, ಆಕರ್ ಬಂದ್ ಮತ್ತು ಸ್ಕೆಚ್ ಗಳನ್ನು ಮಾಡಿಸಿಕೊಂಡಿದ್ದಾರೆ ಎಂದರೆ ಮಾಡಿಸಿಕೂಂಡಿರಬಹುದು. ಸಾಕ್ಷಿ ಮುಂದುವರಿದು ಸರ್ವೇ ನಂ.56/10 ರಲ್ಲಿ ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ.

8. ನಿ.ಪಿ.24 ರಂತೆ ವಸತಿ ಬಡಾವಣೆ ನಕ್ಷೆಯ ಕಾರ್ಯಾದೇಶವನ್ನು ನಾನು ಹಾಜರು ಪಡಿಸಿದ್ದೇನೆ ಎಂದರೆ ಸರಿ. ನಿ.ಪಿ.24 ರಂತೆ ಆದೇಶ ಪಡೆದುಕೊಳ್ಳಬೇಕಾದರೆ ಕಂದಾಯದ ದಾಖಲೆಗಳಾದ ಆರ್.ಟಿ.ಸಿ, ಮ್ಯುಟೇಷನ್ ರೆಜಿಸ್ಟರ್, ಆಕರ್ ಬಂದ್ ಮತ್ತು ಸ್ಕೆಚ್ ಗಳನ್ನು ನೀಡಬೇಕಾಗುತ್ತದೆ ಎಂದರೆ ಅವರು ನೀಡಿರಬಹುದು ಎಂದು ನುಡಿಯುತ್ತಾರೆ. ಮೈಕೊ ಸೊಸೈಟಿಯವರಿಗೆ ಸ್ವತ್ತು ಸ್ವಾಧೀನವಾದ ಸಂದರ್ಭದಲ್ಲಿಯೇ ಆ ಸ್ವತ್ತುಗಳ ಗಡಿ ಗುರುತುಗಳನ್ನು ಗುರುತಿಸಲಾಗಿದೆ ಎಂದರೆ ಸಾಕ್ಷಿಯು ಪಕ್ಕದ ಜಮೀನುದಾರರಿಗೆ ಆ ಬಗ್ಗೆ ಯಾವುದೇ ನೋಟೀಸು ನೀಡಿಲ್ಲ

ಎಂದು ನುಡಿಯುತ್ತಾರೆ. ನನಗೆ ಸರ್ವೇ ನಂ.56/10 ರ ಸ್ವತ್ತನ್ನು ಬಿಟ್ಟರೆ ಬೇರೆ ಯಾವುದೇ ಆಸ್ತಿ ಇಲ್ಲದೇ ಇದ್ದುದ್ದರಿಂದ ಮತ್ತು ಸೊಸೈಟಿಗೆ ಸ್ವಾಧಿನಗೊಂಡ ಸ್ವತ್ತಿನಲ್ಲಿ ನಮಗೆ ಯಾವುದೇ ಜಮೀನು ಇಲ್ಲದೇ ಇದ್ದುದ್ದರಿಂದ ನಮಗೆ ಯಾವುದೇ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. ಮೆಕೊ ಸೊಸೈಟಿಯವರಿಗೆ ಸ್ವಾಧಿನಗೊಂಡ ಸ್ವತ್ತುಗಳಿಗೆ ಲೇಔಟ್ ಪ್ಲಾನು ಅನುಮೋದನೆಗೊಂಡಿದೆ ಎಂದರೆ ಸರಿಯಲ್ಲ.

9. ಪ್ರತಿವಾದಿಯವರ ಸ್ವತ್ತು ಸೈಟ್ ನಂ854 ನ್ನು ಮೆಕೊ ಸೊಸೈಟಿಯ ಬಡಾವಣೆಯಲ್ಲಿದ್ದು ಅದನ್ನು ಅವರ ಸದಸ್ಯರಾದ ಸುಜಾತರವರಿಗೆ ಮಂಜೂರು ಮಾಡಿದ್ದರು ಎಂದರೆ ಸರಿ. ಆ ಸುಜಾತರವರಿಂದ ಪ್ರತಿವಾದಿಯವರು ಖರೀದಿ ಮಾಡಿದ್ದಾರೆ ಎಂದು ಸರಿ.

10. ಸೈಟ್ ನಂ.854 ರ ಪಕ್ಕದಲ್ಲಿರುವ ಸೈಟ್ ನಂ.855 ನನ್ನ ಮಗಳು ಮತ್ತು ಅಳಿಯರವರಿಗೆ ಸೇರಿದ್ದಾಗಿರುತ್ತದೆ. ಸೈಟ್ ನಂ.855 ಸೈಟ್ ನಂ.854 ರ ಪಶ್ಚಿಮ ದಿಕ್ಕಿಗೆ ಬರುತ್ತದೆ. ಸೈಟ್ ನಂ.855 ರ ಪಶ್ಚಿಮ ದಿಕ್ಕಿಗೆ ನಾವು ವಾಸಿಸುತ್ತಿರುವ ಜಮೀನು ಬರುತ್ತದೆ. ನಾನ ವಾಸಿಸುತ್ತಿವ ಜಮೀನು ಮೆಕೊ ಸೊಸೈಟಿಯವರಿಗೆ ಬರುವುದಿಲ್ಲ.

11. ಸೈಟ್ ನಂ.855 ನ್ನು ನನ್ನ ಮಗಳು ಮತ್ತು ಅಳಿಯ 2010 ರಲ್ಲಿ ಖರೀದಿಸಿರುತ್ತಾರೆ. ಮೆಕೊ ಸೊಸೈಟಿಯವರ ಸ್ವತ್ತನ್ನು ಕಬಳಿಸುವ ಉದ್ದೇಶದಿಂದಲೇ ನನ್ನ ಮಗಳು ಮತ್ತು ಅಳಿಯನ ಮುಖಾಂತರ ಸೈಟ್ ನಂ.855 ನ್ನು ಖರೀದಿ ಮಾಡಿಸಿರುತ್ತೇನೆ ಎಂದರೆ

ಸರಿಯಲ್ಲ. ಇದೇ ಸಂದರ್ಭದಲ್ಲಿ ಮೈಕೊ ಸೊಸೈಟಿಯವರಿಗೆ ಸೇರಿದ ಸೈಟ್ ನಂ.854 ಕ್ಕೆ ಸೇರಿದ 4*40 ಅಡಿ ಜಾಗವನ್ನು ಅತಿಕ್ರಮಣಗೊಳಿಸಿ ಕಬಳಿಸಿದ್ದಾರೆ ಎಂದರೆ ಸರಿಯಲ್ಲ. ಈ ಕಾರಣದಿಂದಲೇ ಪ್ರತಿವಾದಿಗಳ ಜೊತೆ ನನ್ನ ಮಗಳು ಮತ್ತು ಅಳಿಯನಿಗೆ ಗಲಾಟೆಯಾಗಿದೆ ಎಂದರೆ ಸರಿಯಲ್ಲ. ನಾವು 854 ರ ಸೈಟಿನ 4*40 ಅಡಿಯನ್ನು ಕಬಳಿಸಿ ಪ್ರತಿವಾದಿಗಳನ್ನು ಅವರ ಜಾಗವನ್ನು ಅನುಭವಿಸುವುದರಿಂದ ವಿಮುಖಗೊಳಿಸಿದ್ದೇವೆ ಎಂದರೆ ಸರಿಯಲ್ಲ.

12. ನಿ.ಪಿ.18 ರಂತೆ ನನ್ನ ಮಗಳು ಮತ್ತು ಅಳಿಯ ಈ ಗಲಾಟೆಯಾದ ನಂತರ ಪ್ರತಿವಾದಿಗಳ ವಿರುದ್ಧ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಕಮಿಷನರ್ ರವರ ನೇಮಕವಾಗಿ ಸ್ಥಳ ಪರಿಶೀಲನೆಗೆ ಕಮಿಷನರ್ ರವರು ಬಂದಿದ್ದರು ಎಂದರೆ ಸರಿ. ಸ್ಥಳ ಪರಿಶೀಲನೆಗೆ ಬಂದಂತಹ ಕಮೀಷನರ್ ರವರಿಗೆ ಸ್ಥಳದ ಬಗ್ಗೆ ಸರಿಯಾಗಿ ಮಾಹಿತಿ ಸಿಗದ ಕಾರಣ ಅದೇ ರೀತಿಯಾಗಿ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ನಿ.ಪಿ.18 ರಲ್ಲಿ ನಮೂದಿಸಿದ ಮೂಲ ದಾವಾ ಸಂಖ್ಯೆ 3805/2011 ಡಿಕ್ರಿಯಾಗಿರುತ್ತದೆ ಅದನ್ನು ಪ್ರಶ್ನಿಸಿ ಪ್ರತಿವಾದಿಗಳು ನಿ.ಪಿ.3 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಅದು ಈಗಲೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಆಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**